# ಓಡಿಬಂದ ಆ ಹುಡುಗ

ಊರಿನಲ್ಲಿ ಚಿತ್ರೀಕರಣ. ನೋಡಲೆಂದು ಕ್ಲಾಸಿಗೆ ಚಕ್ಕರ್ ಹೊಡೆದ ಹುಡುಗನಿಗೆ ಅಪ್ಪನ ಬೆತ್ತದೇಟು. ಚಿತ್ರೀಕರಣ ನೋಡಿಯಷ್ಟೆ ಹುಡುಗ ಸುಮ್ಮನಾಗಲಿಲ್ಲ. ಸಿನಿಮಾ ಮಾಡುವ ಕನಸನ್ನು ಬೇಗ ಕಾಣತೊಡಗಿದ. ಅಪ್ಪ ಅವನನ್ನು ಮನೆಯಿಂದ ಹೊರಹಾಕಿದ. ಹೀಗೆ 'ಕೆಟ್ಟು ಪಟ್ಟಣ ಸೇರಿದ' ಹುಡುಗ ಈಗ ಪದೇ ಪದೇ ಆಂಧ್ರಪ್ರದೇಶಕ್ಕೆ ಹೋಗುತ್ತಾನೆ. ಕನ್ನಡದಲ್ಲಿ ತಾನು ನಿರ್ದೇಶಿಸುವ ಸಿನಿಮಾಗಳು ಆ ಭಾಷೆಯಲ್ಲೂ ರೀಮೇಕ್ ಆಗುತ್ತವೆ ಎಂದು ಜೋರು ದನಿಯಲ್ಲಿ ಹೇಳುತ್ತಾನೆ. ಹಿಂದೆ ಅನೇಕರಿಂದ ಇದೇ ರೀತಿಯಲ್ಲಿ ಏಕವಚನದಲ್ಲೇ ಸಂಬೋಧಿಸಿಕೊಳ್ಳುತ್ತಿದ್ದ ಆ ಹುಡುಗನನ್ನು ಈಗ 'ಅವರು' ಎಂದೇ ಕರೆಯಬೇಕು.

'ನನ್ನೂರಿನಲ್ಲಿ ಕಂಡ ಕಥೆಗಳನ್ನೇ ಬೆಳೆಸಿ ಸಿನಿಮಾ ಮಾಡುತ್ತೇನೆ' ಎಂದು ವರ್ಷಗಳ ಹಿಂದೆ ಹೇಳಿಕೊಂಡಿದ್ದ ಅವರು ಸಾಕಷ್ಟು ಹೋಂವರ್ಕ್ ಮಾಡುತ್ತಾರೆ. ಅನಂತನಾಗ್ ತರಹದ ಹಿರಿಯ ನಟ ಕೂಡ ಅವರ ಕಾರ್ಯವೈಖರಿಯನ್ನು ಕೊಂಡಾಡಿದ್ದಿದೆ.

ಏಳು ವರ್ಷಗಳ ಹಿಂದೆ ಗಾಂಧಿನಗರದಲ್ಲಿ ಮಾತನ್ನೇ ಬಂಡವಾಳ ಮಾಡಿಕೊಂಡಿದ್ದ ಈ ನಿರ್ದೇಶಕ ಕೆಲವೇ ವರ್ಷಗಳಲ್ಲಿ ಶಿವಣ್ಣನ ಕಾಲ್‌ಷೀಟ್ ಪಡೆಯುವ ಮಟ್ಟಕ್ಕೆ ಬೆಳೆದದ್ದು ಆಸಕ್ತಿಕರ. ರಾಜ್‌ಕುಮಾರ್ ಅಭಿನಯದ ಹಳೆಯ ಒಂದು ಸಿನಿಮಾದಲ್ಲಿ ಕುರಿಗೆ ಇದ್ದ ಹೆಸರನ್ನೇ ಸಿನಿಮಾ ಶೀರ್ಷಿಕೆಯಾಗಿ ಇಟ್ಟು ಗೆದ್ದದ್ದು ಅಚ್ಚರಿಯೇ ಹೌದು.

ಸಿನಿಮಾರಂಗ ಒಮ್ಮೆ ಕೈಹಿಡಿದರೆ ಅದೃಷ್ಟ ಒದ್ದುಕೊಂಡು ಬಂದಂತೆಯೇ ಸರಿ. ಉಪೇಂದ್ರ ಅಭಿನಯದ ಸಿನಿಮಾದ ಹಣೆಬರಹ ತಿದ್ದುವ ಬ್ರಹ್ಮ ಆಗಿಬಿಟ್ಟರು ಈ ನಿರ್ದೇಶಕ. ಪೂಜಾರಿಯ ಹೂಂಕಾರ ನೋಡಿದ ಪ್ರೇಕ್ಷಕರು ಬೆಚ್ಚಿಬಿದ್ದರೆನ್ನುವುದು ಬೇರೆ ಮಾತು.

ಮಾರುಕಟ್ಟೆಯ ನಾಡಿಮಿಡಿತದ ಕುರಿತು ತಮ್ಮ ಗುಂಡು ಮುಖದಲ್ಲಿ ನಗು ತುಳುಕಿಸುತ್ತಾ ಮಾತನಾಡುವ ನಿರ್ದೇಶಕ, ಪ್ರಜ್ಞಾಪೂರ್ವಕವಾಗಿ ತಮಗೆ ಮುಗ್ಧತೆ ಇದೆ ಎನ್ನುವುದನ್ನು ತೋರ್ಪಡಿಸಿಕೊಳ್ಳುವುದೂ ಇದೆ.

'ಶಾಟ್'ಗಳನ್ನು ಜನಪ್ರಿಯ ಧಾಟಿಯಲ್ಲಿ ತೆಗೆಯುವಾಗ ಇವರಿಗಿರುವ ಸ್ಪಷ್ಟತೆಯ ಬಗೆಗೆ ಶಿವಣ್ಣ ಅನೇಕ ಸಲ ಮೆಚ್ಚುಗೆ ಸೂಸಿದ್ದಿದೆ. ಆ ಮೆಚ್ಚುಗೆ ಇನ್ನೊಂದು ಸಿನಿಮಾಗೆ ಕಾಲ್‌ಷೀಟ್ ಕೊಡುವಷ್ಟರ ಮಟ್ಟಿಗೆ ಬೆಳೆದದ್ದು ಕೂಡ ಅನೇಕರ ಪಾಲಿಗೆ ಅಚ್ಚರಿ. ಬೇರೆ ಭಾಷೆಯ ಸಿನಿಮಾಗಳನ್ನು ಇಲ್ಲಿ ರೀಮೇಕ್ ಮಾಡುವವರ ಸಂಖ್ಯೆ ಹೆಚ್ಚು. ಈ ನಿರ್ದೇಶಕ ಅದಕ್ಕೆ ಅಪವಾದ. ಕನ್ನಡದ ಪ್ರೇಮಕಥಾನಕವೊಂದನ್ನು ತೆಲುಗಿನಲ್ಲಿ ನಿರ್ದೇಶಿಸಿ ಬಂದಿರುವುದು ಯಶಸ್ಸಿನ ಟೋಪಿಯಲ್ಲಿ ಕಾಣುವ ಇನ್ನೊಂದು ಗರಿ.

ಚಿಕ್ಕಬಳ್ಳಾಪುರ ತಾಲ್ಲೂಕಿನ ಹಳ್ಳಿಯೊಂದರಿಂದ ಅಪ್ಪನ ಬೆತ್ತದೇಟಿನ ರುಚಿ ನೋಡಿ ಹುಡುಗ ಓಡಿಬರದೇ ಹೋಗಿದ್ದರೆ ಕನ್ನಡ ಚಿತ್ರರಂಗದಲ್ಲಿ ಇಂಥ ಅಚ್ಚರಿಗಳು ಆಗುತ್ತಿರಲಿಲ್ಲವೇನೋ ಎಂದು ಕೆಲವರು ತಮಾಷೆಯಾಗಿ ಮಾತನಾಡುವುದಿದೆ. ಅದ್ಯಾವುದಕ್ಕೂ ತಲೆಕೆಡಿಸಿಕೊಳ್ಳದ ನಿರ್ದೇಶಕ ಹಣೆ ಮೇಲೆ ಢಾಳಾಗಿ ಇಡುವ ಕುಂಕುಮ ನಗುತ್ತಾ ಇರುತ್ತದೆ.

● ವಿಶಾಖ ಎನ್.

Printed and Published by S.V. Srinivasan on behalf of **The Printers (Mysore) Private Ltd.** Printed at M/s.Geetanjali Graphics # B-71, New No.84, KSSIDC, Indl. Estate, 6th Block, Rajajinagar, Bengaluru-560010. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: **K.N. SHANTH KUMAR.**

Editorial Office: 75, M.G Road, Bengaluru-560 001 E-mail:editormy@mayura.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited. RNI No 17129/68